- ತೆಲುಗು ಮೂಲ: **ನಕ್ಷತ್ರಂ ವೇಣುಗೋಪಾಲ್**
- ಕನ್ನಡಕ್ಕೆ: **ಎಂ.ಜಿ. ಶುಭಮಂಗಳ**



ಕಲೆ: ಈಶ್ವರ ಬಡಿಗೇರ

ಸಿಕಂದರಾಬಾದ್–ಮನ್ಮಾಡ್ ಲೈನಿನ ಮೇಲೆ ಗಾಢ ಕತ್ತಲು. ತಣ್ಣನೆ ಗಾಳಿಯನ್ನು ಸೀಳುತ್ತ ವೇಗವಾಗಿ ಚಲಿಸುತ್ತಿರುವ ಗೂಡ್ಸ್. ಮೊದಲೇ ಮೀಟರ್ ಗೇಜ್, ಸಿಂಗಲ್ ಲೈನ್. ಎದುರಿಗೆ ಯಾವುದೇ ಪ್ಯಾಸೆಂಜರ್ ಟ್ರೈನ್ ಬಂದರೂ ಅದು ಹೋಗುವವರೆಗೂ ಆ ಸ್ಟೇಷನ್‌ನಲ್ಲಿ ನಿಲ್ಲಬೇಕಾದ್ದೇ. ರೈಲ್ ಎಂಜಿನ್‌ನಲ್ಲಿ ಕುಳಿತು, ತಲೆ ಹೊರ ಹಾಕಿ ಸಿಗ್ನಲ್ ನೋಡುತ್ತಿದ್ದ ನನಗೆ ಬಹಳ ಕಿರಿಕಿರಿಯಾಗುತ್ತಿದೆ. ಆದರೂ ವಿಧಿಯಿಲ್ಲ, ನನ್ನ ಕೆಲಸವೇ ಅದು! ತಲೆ ಹೊರಹಾಕಿ ಸಿಗ್ನಲ್ ಗಮನಿಸುತ್ತ ಡ್ರೈವರ್‌ಗೆ ಸೂಚಿಸುವ ಅಸಿಸ್ಟೆಂಟ್ ಡ್ರೈವರ್ ಕೆಲಸ. ಕೆಲಸಕ್ಕೆ ಸೇರಿ ಹೆಚ್ಚುಕಡಿಮೆ ಒಂದು ವರ್ಷವಾಗುತ್ತಿದೆ. ಕೆಲಸಕ್ಕೆ ಸೇರಿದ ಹೊಸದರಲ್ಲಿ ತಣ್ಣನೆ ಗಾಳಿಯಲ್ಲಿ ಪ್ರಯಾಣಿಸುತ್ತಿದ್ದರೆ ಹಾಯಾಗಿದೆ ಎನಿಸುತ್ತಿತ್ತು. ಬರುಬರುತ್ತ ಇದು ಕಿರಿಕಿರಿಯಾಗತೊಡಗಿದೆ.

ನನ್ನವರನ್ನೆಲ್ಲ ಬಿಟ್ಟು, ಸ್ಥಿರ ವಿಳಾಸವಿಲ್ಲದೆ, ತಿಂಗಳುಗಟ್ಟಲೆ ಎಲ್ಲೆಂದರಲ್ಲಿ, ಒಮ್ಮೊಮ್ಮೆ ಒಂದೇ ಸ್ಟೇಷನಿನಲ್ಲಿ ನಾಲ್ಕೈದು ದಿನ ಇರಬೇಕಾದ್ದೇ. ಪ್ಯಾಸೆಂಜರ್ ರೈಲಾದರೂ ಆಗಿದ್ದರೆ ಪ್ರತಿ ಸ್ಟೇಷನ್ನಿನಲ್ಲಿ ನಿಂತು ಪ್ರಯಾಣಿಕರನ್ನು ನೋಡುತ್ತ ಶ್ರಮ ಮರೆಯಬಹುದು, ನನಗೆ ಆ ಅದೃಷ್ಟವೂ ಇಲ್ಲ. ಏಕೆಂದರೆ ಗೂಡ್ಸ್ ರೈಲಿನಲ್ಲಿ ನನ್ನ ಕೆಲಸ. ಒಬ್ಬ ಡ್ರೈವರ್ ಬಿಟ್ಟರೆ ಇನ್ಯಾರೂ ಮಾತನಾಡಲು ಸಿಗುವುದಿಲ್ಲ, ಒಬ್ಬರ ಹತ್ತಿರವೇ ಮಾತನಾಡುವುದಕ್ಕೆ ಏನಿರುತ್ತದೆ ಹೆಚ್ಚಿಗೆ. ಕಿರಿಕಿರಿಯೆನಿಸಿದರೂ ವಿಧಿಯಿಲ್ಲದೆ ಡ್ರೈವರನ್ನೇ ಮಾತನಾಡಿಸುವುದು, ಅವರ ಕಷ್ಟಸುಖ ತಿಳಿದುಕೊಳ್ಳುವುದು ಮಾಡುತ್ತಿದ್ದೆ.